# ಸ್ತ್ರೀಮತಕ್ಕುತ್ತರಿಸದ ಎಲ್ಲ ಕಾಲದ ಗಂಡು

ಪತ್ನಿಯಿಂದ ದೂರವಾಗಿರುವ ಪುರುಷ ರಾಜಕಾರಣಿಗಳು ನಮ್ಮ ನಡುವೆಯಿದ್ದಾರೆ. ಅವಿವಾಹಿತರೆಂದು ಹೆಮ್ಮೆಯಿಂದ ಗುರ್ತಿಸುವ ರಾಜಕಾರಣಿಗಳ ಮಾದರಿಯೂ ನಮ್ಮ ರಾಜಕೀಯ ಚರಿತ್ರೆಯಲ್ಲಿದೆ. ಕುಟುಂಬದ ಜವಾಬ್ದಾರಿಗೆ ಬೆನ್ನುಹಾಕಿದ ನಾಯಕರು ದೇಶವನ್ನು ಕಟ್ಟುವ ಜವಾಬ್ದಾರಿಯನ್ನು ನಿರ್ವಹಿಸುವುದು ಸಾಧ್ಯವೆ?

ಜನಸಾಮಾನ್ಯರ ಸಂಕಟ ಸಮಸ್ಯೆಗಳ ಬಗ್ಗೆ ತುಟಿ ಬಿಚ್ಚದ ರಾಜಕಾರಣಿಗಳು, ಹೆಣ್ಣುಮಕ್ಕಳ ಬಗ್ಗೆ ತುಂಬಾ ಸುಲಭವಾಗಿ ನಾಲಗೆ ಹಿಡಿತ ಕಳೆದುಕೊಳ್ಳುವುದು ಸಮಕಾಲೀನ ರಾಜಕಾರಣದ ಸಾಮಾನ್ಯ ಸಂಗತಿ ಎನ್ನುವಂತಾಗಿದೆ. ಅತ್ಯಾಚಾರಕ್ಕೆ ಸಂಬಂಧಿಸಿದಂತೆ ಹೆಣ್ಣುಮಕ್ಕಳ ಉಡುಪಿನ ಬಗ್ಗೆ ಮಾತನಾಡುವ ಸಂವೇದನೆ ನಮ್ಮ ಪ್ರಜಾಪ್ರತಿನಿಧಿಗಳದು. ಹೆಬ್ಬೆಟ್ಟಾದರೂ ಡಿಗ್ರಿ ಪಡೆದರೂ ಮಹಿಳೆಯರ ಬಗೆಗಿನ ಮನೋಭಾವದಲ್ಲಿ ಯಾವ ವ್ಯತ್ಯಾಸವೂ ಇಲ್ಲ ಎನ್ನುವುದಕ್ಕೆ ಹೊಸ ಉದಾಹರಣೆ, ‘ಆಧುನಿಕ ಮಹಿಳೆ’ಯರ ಬಗ್ಗೆ ಆರೋಗ್ಯ ಸಚಿವ ಕೆ. ಸುಧಾಕರ್ ವ್ಯಕ್ತಪಡಿಸಿರುವ ಟೀಕೆಟಿಪ್ಪಣಿ. ಅವರ ಅಭಿಪ್ರಾಯವನ್ನು ಸೂತ್ರ ರೂಪದಲ್ಲಿ ಹೀಗೆ ಹೇಳಬಹುದು: ಭಾರತದ ಆಧುನಿಕ ಮಹಿಳೆಯರು ಒಂಟಿಯಾಗಿ ಇರಲು ಬಯಸುತ್ತಾರೆ. ಮದುವೆಯಾದರೂ ಮಕ್ಕಳಿಗೆ ಜನ್ಮ ನೀಡಲು ಬಯಸುವುದಿಲ್ಲ. ಬಾಡಿಗೆ ತಾಯ್ತನದಿಂದ ಮಕ್ಕಳನ್ನು ಪಡೆಯುತ್ತಾರೆ. ಅದು ಒಳ್ಳೆಯದಲ್ಲ.

ಸುಧಾಕರ್ ಅವರ ಅಭಿಪ್ರಾಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರಿಗೂ ಸರಿಯೆನ್ನಿಸಿದೆ. ಈ ಹೇಳಿಕೆ ಮತ್ತು ಸಮರ್ಥನೆಗಳ ಜೊತೆಗೆ, ‘ಹೆಚ್ಚು ಮಹಿಳಾ ಸಿಬ್ಬಂದಿ ಇರುವ ಶಾಲೆಗಳಲ್ಲಿ ಜಗಳ ಹೆಚ್ಚಾಗಿರುತ್ತದೆ’ ಎನ್ನುವ ರಾಜಸ್ತಾನ ಶಿಕ್ಷಣ ಸಚಿವರ ಹೇಳಿಕೆಯನ್ನೂ ಗಮನಿಸಬೇಕು.

ಹೆಣ್ಣುಮಕ್ಕಳ ಬಗ್ಗೆ ಲಘುವಾಗಿ ಮಾತನಾಡಿರುವ ರಾಜಕಾರಣಿಗಳ ಬಗ್ಗೆ ಆಶ್ಚರ್ಯಪಡಬೇಕಾಗಿಲ್ಲ. ಇಂಥ ಮಾತುಗಳನ್ನಾಡುವ ಮೂಲಕ ತಾವು ರಾಜಕಾರಣಿಗಳೆನ್ನುವುದನ್ನು ಅವರು ಮತ್ತೆ ಮತ್ತೆ ರುಜುವಾತು ಪಡಿಸುತ್ತಿರುವಂತಿದೆ. ಆರೋಗ್ಯ, ವೈದ್ಯಕೀಯ, ಸಂಸ್ಕೃತಿ, ಶಿಕ್ಷಣ – ಇಂಥ ಇಲಾಖೆಗಳನ್ನು ನಿರ್ವಹಿಸಿದ ನಂತರವೂ ಆ ಅನುಭವದಿಂದ ಏನನ್ನೂ ಕಲಿಯದವರು ನಮ್ಮ ನಡುವೆಯಿದ್ದಾರೆ. ಹೆಣ್ಣೊಬ್ಬಳು ತಾನು ತಾಯಿ ಆಗಬೇಕೋ ಅಥವಾ ಬೇಡವೋ ಎಂದು ಕೈಗೊಳ್ಳುವ ನಿರ್ಧಾರ ವಿಪರ್ಯಾಸ ಆಗಬೇಕಾಗಿಲ್ಲ; ಸಹೋದ್ಯೋಗಿಗಳ ರಾಸಲೀಲೆಯ ದೃಶ್ಯಮುದ್ರಿಕೆಗಳ ಬಗ್ಗೆ ಮೌನವಾಗಿರುವವರು, ತಮ್ಮ ಚಾರಿತ್ರ್ಯಕ್ಕೆ ಧಕ್ಕೆಯಾಗುವ ಯಾವುದೇ ಸುದ್ದಿ–ದೃಶ್ಯಮುದ್ರಿಕೆಗಳನ್ನು ಪ್ರಸಾರ ಮಾಡಬಾರದೆಂದು ನ್ಯಾಯಾಲಯದ ತಡೆಯಾಜ್ಞೆಯ ಗುರಾಣಿ ಬಳಸಿಕೊಳ್ಳುವವರು, ಸಾಮಾಜಿಕ ನೈತಿಕತೆ ಮತ್ತು ಸಂಸ್ಕೃತಿಯ ಬಗ್ಗೆ ಮಾತನಾಡುವುದು ನಿಜವಾದ ವಿಪರ್ಯಾಸ.

ಹೆಣ್ಣುಮಕ್ಕಳು ತಾಯಿ ಆಗದಿರುವ ತೀರ್ಮಾನ ಕೈಗೊಳ್ಳುವುದರ ಬಗ್ಗೆ ಆತಂಕ ವ್ಯಕ್ತಪಡಿಸುವ ಪ್ರಜಾಪ್ರತಿನಿಧಿಗಳು, ತಾವು ಸೃಷ್ಟಿಸಿರುವ ಸಮಾಜ ಯಾವ ಬಗೆಯದೆನ್ನುವುದರ ಬಗ್ಗೆ ಯೋಚಿಸಬೇಕು. ಸಾಮೂಹಿಕ ಅತ್ಯಾಚಾರಗಳ ಬಗ್ಗೆ ಆಡಳಿತಾರೂಢ ಪಕ್ಷಗಳ ರಾಜಕಾರಣಿಗಳು ಕುರುಡರಾಗಿದ್ದಾರೆ, ಕಿವುಡರಾಗಿದ್ದಾರೆ. ರಾಜಕಾರಣಿಗಳ ಲೈಂಗಿಕ ಹಗರಣ, ಅಪರಾಧ ಪ್ರಕರಣಗಳು ಸಿನಿಮಾ ಸುದ್ದಿಗಳಂತೆ ವರದಿಯಾಗುತ್ತಿವೆ. ಇಂಥ ಸನ್ನಿವೇಶದಲ್ಲಿ ತನ್ನ ಕರುಳಕುಡಿಗೆ ಈ ಸಮಾಜ ಆರೋಗ್ಯಕರವಾದುದಲ್ಲ ಎಂದು ಹೆಣ್ಣೊಬ್ಬಳು ಭಾವಿಸಿ, ತಾಯಿಯಾಗದಿರಲು ನಿರ್ಧರಿಸಿದರೆ ಅದರಲ್ಲಿ ಆಶ್ಚರ್ಯವೇನು? ಆತಂಕ ಇರಬೇಕಾದುದು – ಆಧುನಿಕ ಮಹಿಳೆಯರು ಮಾತೃತ್ವದ ಬಗ್ಗೆ ನಕಾರಾತ್ಮಕ ಧೋರಣೆ ಬೆಳೆಸಿಕೊಳ್ಳುತ್ತಿರುವುದರ ಕುರಿತಾಗಿಯಲ್ಲ; ಆ ನಿರ್ಧಾರಕ್ಕೆ ರಾಜಕಾರಣಿಗಳು ಎಷ್ಟು ಕಾರಣ ಎನ್ನುವುದರ ಬಗ್ಗೆ.

ಆಧುನಿಕ ಮಹಿಳೆಯರ ಒಲವು ನಿಲುವುಗಳ ಬಗ್ಗೆ ರಾಜಕಾರಣಿಗಳು ಮಾತನಾಡಿರುವುದನ್ನು ಮತ್ತೊಂದು ದೃಷ್ಟಿಕೋನದಿಂದಲೂ ನೋಡಬೇಕಾಗಿದೆ. ವಿವಾಹದ ನಂತರವೂ ಹೆಣ್ಣುಮಕ್ಕಳು ತಾಯಿಯಾಗಲು ಹಿಂಜರಿಯುತ್ತಿರುವುದು ಸಚಿವರಿಗೆ ವಿಪರ್ಯಾಸವಾಗಿ ಕಂಡಿದೆ. ಭಾರತೀಯ ಕೌಟುಂಬಿಕ ಪರಿಕಲ್ಪನೆಗೆ ಮಾಡರ್ನ್ ಮಹಿಳೆಯರು ವಿರುದ್ಧವಾಗಿದ್ದಾರೆ ಎನ್ನುವುದು ಅವರ ಮಾತಿನ ಇಂಗಿತ. ಕುಟುಂಬ ವ್ಯವಸ್ಥೆಗೆ ಎರಡು ಕೇಂದ್ರಗಳಷ್ಟೇ: ಹೆಣ್ಣು ಮತ್ತು ಗಂಡು. ಈ ಎರಡು ಕೇಂದ್ರಗಳಲ್ಲಿ ಮಾಡರ್ನ್ ಮಹಿಳೆಯ ಮಾದರಿಯನ್ನು ಸಚಿವರು ಗಮನಿಸಿದ್ದಾರೆ. ಅವರು ಗಮನಿಸದ ಮತ್ತೊಂದು ಮಾದರಿಯೂ ಇದೆ. ಅದು ಮಾಡರ್ನ್ ಪುರುಷನದು. ಕುಟುಂಬದ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿರುವ ಪುರುಷರನ್ನು ಹೇಗೆ ಗುರ್ತಿಸಬೇಕು ಎನ್ನುವುದನ್ನು ‘ಭಾರತೀಯ ಸಂಸ್ಕೃತಿ’ಯ ಬಗ್ಗೆ ಅತೀವ ಕಾಳಜಿಯುಳ್ಳ ರಾಜಕಾರಣಿಗಳೇ ಹೇಳಬೇಕು.

ಪತ್ನಿಯಿಂದ ದೂರವಾಗಿರುವ ಪುರುಷ ರಾಜಕಾರಣಿಗಳು ನಮ್ಮ ನಡುವೆಯಿದ್ದಾರೆ. ಅವಿವಾಹಿತರೆಂದು ಹೆಮ್ಮೆಯಿಂದ ಗುರ್ತಿಸುವ ರಾಜಕಾರಣಿಗಳ ಮಾದರಿಯೂ ನಮ್ಮ ರಾಜಕೀಯ ಚರಿತ್ರೆಯಲ್ಲಿದೆ. ಪತ್ನಿಯಿಂದ ಹಾಗೂ ಕುಟುಂಬದಿಂದ ಅಂತರ ಕಾಪಾಡಿಕೊಂಡಿರುವ ಈ ಪುರುಷರು ಭಾರತೀಯ ಮೌಲ್ಯಪದ್ಧತಿಗೆ ಹೊಂದುತ್ತಾರೆಯೆ? ಕುಟುಂಬದ ಜವಾಬ್ದಾರಿಗೆ ಬೆನ್ನುಹಾಕಿದ ನಾಯಕರು ದೇಶವನ್ನು ಕಟ್ಟುವ ಜವಾಬ್ದಾರಿಯನ್ನು ನಿರ್ವಹಿಸುವುದು ಸಾಧ್ಯವೆ? ದೇಶದ ಇಂದಿನ ಬಿಕ್ಕಟ್ಟುಗಳಿಗೆ ಅಧಿಕಾರದ ಸೂತ್ರಗಳನ್ನು ನಿರ್ವಹಿಸುತ್ತಿರುವ ರಾಜಕಾರಣಿಗಳಿಗೆ ಕುಟುಂಬ ನಿರ್ವಹಣೆಯ ಅನುಭವ ಇಲ್ಲದಿರುವುದು ಕಾರಣವಾಗಿರಬಹುದೆ? ತಮಾಷೆಯಂತೆ, ವ್ಯಂಗ್ಯದಂತೆ ಕಾಣಿಸಬಹುದಾದ ಈ ಪ್ರಶ್ನೆಗಳು ಲಿಂಗತಾರತಮ್ಯದ ಜೊತೆಗೆ ರಾಜಕಾರಣದಲ್ಲಿ ಬೇಕಾದ ಕೌಟುಂಬಿಕ ತಾತ್ವಿಕತೆಯ ಹಿನ್ನೆಲೆಯಲ್ಲಿ ಮುಖ್ಯವಾದವು. ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ನಾವು ಹಿಂಜರಿದರೆ, ಸಮಕಾಲೀನ ಭಾರತೀಯ ಸಮಾಜ–ಸಂಸ್ಕೃತಿಯ ಕುರಿತ ನಮ್ಮ ಟೀಕೆಟಿಪ್ಪಣಿಗಳು ಏಕಮುಖಿ ಆಗಿಬಿಡುತ್ತವೆ.

■ ರಘುನಾಥ ಚ.ಹ.

